ಬೀದರ್ ಜಿಲ್ಲೆಯಲ್ಲಿರುವ ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಭಿವೃದ್ಧಿ

444 - ಶ್ರೀ ಬಸವರಾಜ ಪಾಟೀಲ್ ಆಟ್ಟೂರು (ಬಸವಕಲ್ಯಾಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿರುವ ತಾಲ್ಲೂಕುಮಟ್ಟದ ಆಸ್ಪತ್ರೆಗಳ ಸಂಖ್ಯೆ ಎಷ್ಟು? ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?(ತಾಲ್ಲೂಕುವಾರು ಅಂಕಿ-ಅಂಶಗಳನ್ನು ಒದಗಿಸುವುದು)

ಆ) ಆ ಪೈಕಿ ಯಾವ ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗುತ್ತಿದೆ (ತಾಲ್ಲೂಕುವಾರು ಅಂಕಿಅಂಶಗಳನ್ನು ಒದಗಿಸುವುದು)

ಇ) ಈ ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಭಿವೃದ್ಧಿಗಾಗಿ ಏಷಿಯಾ ಅಭಿವೃದ್ಧಿ ಬ್ಯಾಂಕಿನಿಂದಾಗಲಿ ಅಥವಾ ವಿಶ್ವ ಬ್ಯಾಂಕಿನಿಂದಾಗಲಿ ನೆರವನ್ನು ಕೇಳಲಾಗಿದೆಯೇ?

ಈ) ಹಾಗಿದ್ದಲ್ಲಿ ಯಾವ ಬ್ಯಾಂಕಿನಿಂದ ನೆರವು ಬಂದಿರುವುದು ಎಷ್ಟು?

ಉ) ಬಸವಕಲ್ಯಾಣ ತಾಲ್ಲೂಕಿನ ಮಂಟಾಳ ಮತ್ತು ಕೋಹಿನೂರು ಹಾಗೂ ಹುಲಸೂರು ರಾಜೇಶ್ವರ ಗ್ರಾಮಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ?

ಡಾ. ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ)

ತಾಲ್ಲೂಕು	ಸಾ. ಆಸ್ಪತ್ರೆ	ಪ್ರಾ. ಆ. ಕೇಂದ್ರ
ಔರದ್	1	7
ಬಸವಕಲ್ಯಾಣ	1	8
ಬಾಲ್ಕಿ	1	8
ದುಮ್ಮಾಬಾದ್	1	8
ಬೀದರ್	1	7
	5	**38**

ಆ) ಆಸ್ಪತ್ರೆಯ ಹೆಸರು	ಹಾಲಿಹಾಸಿಗೆಗಳ ಸಂಖ್ಯೆ	ಹೆಚ್ಚಿಸಿದ ಮೇಲೆ ಹಾಸಿಗೆ ಸಂಖ್ಯೆ
ಜಿಲ್ಲೆ ಆಸ್ಪತ್ರೆ, ಬೀದರ್	233	350
ಸಾ.ಆ .ಬೀದರ್	20	30
ಸಾ.ಆ. ಬಸವಕಲ್ಯಾಣ	36	50
ಸಾ.ಆ. ಭಾಲ್ಕಿ	30	100
ಸಾ.ಆ. ಹುಮ್ನಾಬಾದ್	30	50

ಇ) -ಇಲ್ಲ-

ಈ) ಜರ್ಮನ್ ಆರ್ಥಿಕ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದು ಅದು ಒಪ್ಪಂದದ ಹಂತದಲ್ಲಿದೆ. ಇನ್ನೂ ಆರ್ಥಿಕ ನೆರವು ದೊರೆತಿರುವುದಿಲ್ಲ.

ಉ) ಈಗಿನ ಜಿಲ್ಲಾ ಪಂಚಾಯತನಿಂದ ಪ್ರಸ್ತಾವನೆ ಬಂದ ನಂತರ ಪರಿಶೀಲಿಸಬಹುದಾಗಿರುತ್ತದೆ.

ರಾಜ್ಯದಲ್ಲಿ ಶ್ರೀ ಮೊರಾರ್ಜಿ ದೇಸಾಯಿ ಕೇಂದ್ರೀಯ ವಿದ್ಯಾಲಯಗಳು

445 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಪ್ರಾಥಮಿಕ ಹಾಗೂ ಪ್ರಾಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ವರ್ಷದಲ್ಲಿ ರಾಜ್ಯದಲ್ಲಿ ಯಾವ ಜಿಲ್ಲಾ ಕೇಂದ್ರಗಳಲ್ಲಿ ಶ್ರೀ ಮೊರಾರ್ಜಿ ದೇಸಾಯಿಯವರ ಕೇಂದೀಯ ವಿದ್ಯಾಲಯಗಳನ್ನು ಪ್ರಾರಂಭಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು).

ಆ) ಶಾಲೆಗಳನ್ನು ತೆರೆಯುವ ಉದ್ದೇಶವೇನು ಇದರಿಂದ ಗ್ರಾಮೀಣ ಪ್ರದೇಶದ ಬಡಜನತೆಗೆ ಅನುಕೂಲವಾಗುವುದೇ, ಹಾಗಿದ್ದಲ್ಲಿ, ವಿವರ ನೀಡುವುದು.

ಇ) ಬೀದರ್ ಜಿಲ್ಲೆಯ ಯಾವ ತಾಲ್ಲೂಕುಗಳಲ್ಲಿ ಈ ವಿದ್ಯಾಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ?

ಈ) ಈ ವಿದ್ಯಾಲಯಗಳನ್ನು ಬಸವಕಲ್ಯಾಣದಲ್ಲಿ ಸ್ಥಾಪಿಸಲು ಸರ್ಕಾರದವರು ಕೈಗೊಂಡಿರುವರೆ, ಹಾಗಿದ್ದಲ್ಲಿ ಎಂದು ಪ್ರಾರಂಭಿಸಲಾಗುವುದು ಹಾಗೂ ಯಾವ ಸ್ಥಳದಲ್ಲಿ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಪ್ರಸ್ತುತ ಇನ್ನೂ ಪ್ರಾರಂಭಿಸಿಲ್ಲ. ಆದರೆ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಶ್ರೀ ಮೊರಾರ್ಜಿದೇಸಾಯಿರವರ ಹೆಸರಿನಲ್ಲಿ ಕೇಂದ್ರೀಯ ವಿದ್ಯಾಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧ - 1ರಲ್ಲಿ ಲಗತ್ತಿಸಲಾಗಿದೆ).